ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕು ವಿದ್ಯುತ್ ಪೂರೈಕೆ ಸುಧಾರಿಸುವ ಬಗ್ಗೆ

304 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸವಣೂರಿನಲ್ಲಿ 110 ಕೆ.ವಿ. ಸ್ಟೇಷನ್ ಕೆಲಸವನ್ನು ಎಂದು ಪ್ರಾರಂಭ ಮಾಡಲಾಗಿದೆ. ಸದರಿ ಕೆಲಸವನ್ನು ಎಷ್ಟು ದಿವಸದೊಳಗಾಗಿ ಮುಗಿಸಲಾಗುವುದು.*

ಆ) *ಧಾರವಾಡ ಜಿಲ್ಲೆಯ ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಅತಿ ಕಡಿಮೆ ವೋಲ್ಟೇಜ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಇ) *ಹಾಗಿದ್ದಲ್ಲಿ ಶಿಗ್ಗಾಂವ ತಾಲ್ಲೂಕು ಬಂಕಾಪುರಕ್ಕೆ 33 ಕೆ.ವಿ. ಸ್ಟೇಷನ್ ಹಾಗೂ ಸವಣೂರು ತಾಲ್ಲೂಕು ಹತ್ತಿ ಮತ್ತೂರುದಲ್ಲಿ 33 ಕೆ.ವಿ. ಸ್ಟೇಷನ್ ಕೆಲಸಗಳನ್ನು ಎಂದು ಪ್ರಾರಂಭಿಸಲಾಗುವುದು?*

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಅಕ್ಟೋಬರ್ 95 ರಲ್ಲಿ ಪೂರ್ವಭಾವಿ ಕೆಲಸಗಳನ್ನು ಪ್ರಾರಂಭಮಾಡಲಾಗಿದ್ದು, ನಿರ್ಮಾಣ ಕಾರ್ಯವನ್ನು ಜೂನ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಗುರಿ ಹೊಂದಿದೆ.

ಆ) ಹೌದು

ಇ) ಸವಣೂರಿನಲ್ಲಿ 110 ಕೆ.ವಿ. ಸ್ಟೇಷನ್ ಕಾರ್ಯಾರಂಭ ಮಾಡಿದಾಗ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳೆರಡರಲ್ಲೂ ವಿದ್ಯುತ್ ಸರಬರಾಜು ಪರಿಸ್ಥಿತಿ ಸುಧಾರಣೆಗೊಳ್ಳುತ್ತದೆ. ಆದ್ದರಿಂದ ಸವಣೂರಿನಲ್ಲಿ 110 ಕೆ.ವಿ. ಸ್ಟೇಷನ್ ಸ್ಥಾಪನೆ ಬಗ್ಗೆ ಈಗ ಕ್ರಮಕೈಗೊಳ್ಳಲಾಗಿದೆ.

ಬಂಕಾಪುರ ಮತ್ತು ಹತ್ತಿಮತ್ತೂರುಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳ ಸ್ಥಾಪನೆ ಬಗ್ಗೆ ಯೋಜನಾ ವರದಿಗಳನ್ನು ಪರಿಶೀಲಿಸಲಾಗುತ್ತಿದೆ.

ತಿಪಟೂರು ತಾಲ್ಲೂಕು ಹೊನ್ನಾವಳಿಯಲ್ಲಿ ಪ್ರಾರಂಭಿಸಲುದ್ದೇಶಿಸಿದ್ದ ವಿದ್ಯುತ್ ವಿತರಣಾ ಕೇಂದ್ರ

222 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ತಿಪಟೂರು ತಾಲ್ಲೂಕು ಹೊನ್ನವಳ್ಳಿಯಲ್ಲಿ ಪ್ರಾರಂಭಿಸಲುದ್ದೇಶಿಸಿದ್ದ ವಿದ್ಯುತ್ ವಿತರಣಾ ಕೇಂದ್ರದ ಯೋಜನೆ ಯಾವ ಹಂತದಲ್ಲಿದೆ ಇದು ಪೂರ್ಣಗೊಳ್ಳಲು ಎಷ್ಟು ಸಮಯ ಬೇಕಾಗುತ್ತದೆ.*

ಆ) *ಇದೇ ತಾಲ್ಲೂಕು ನೊಣವಿನಕೆರೆ ಗ್ರಾಮದಲ್ಲಿ ಈಗಾಗಲೇ 1993 ಉದ್ಘಾಟನೆಯಾದ ವಿದ್ಯುತ್ ಘಟಕ ಎಂ.ಎನ್. ಕೇಂದ್ರ, ಯಾವಾಗ ಕಾರ್ಯ ಪ್ರಾರಂಭವಾಗುವುದು?*

ಶ್ರೀ ಹೆಚ್.ಕೆ. ಪಾಟೀಲ್ (ಉಪಮುಖ್ಯ ಮಂತ್ರಿಗಳು) :

ಅ) ಈ ಪ್ರಸ್ತಾವನೆಯು ಇನ್ನು ಪರಿಶೀಲನೆಯ ಹಂತದಲ್ಲಿದೆ. ಆದ್ದರಿಂದ, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ವಿಷಯವು ಈಗ ಉದ್ಭವಿಸುವುದಿಲ್ಲ.

ಆ) ನೊಣವಿನ ಕೆರೆಯಲ್ಲಿ 110 ಕೆವಿ ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾರ್ಯವನ್ನು ಜುಲೈ 95ರಲ್ಲಿ ಪ್ರಾರಂಭಿಸಲಾಗಿದೆ. ನಿರ್ಮಾಣ ಕಾರ್ಯವನ್ನು ಜೂನ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.